ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ವೈದ್ಯಕೀಯ, ದಂತವೈದ್ಯಕೀಯ, ಫಾರ್ಮಸಿ, ಶುಶ್ರೂಷಾ ಮಹಾ ವಿದ್ಯಾಲಯಗಳ ಜೊತೆಗೆ 250 ಹಾಸಿಗೆಗಳುಳ್ಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು 750 ಹಾಸಿಗೆಗಳ ಸುಸಜ್ಜಿತ ಆಧುನಿಕ ಆಸ್ಪತ್ರೆ ಮತ್ತು ಇತರೆ ಪೂರಕ ಕಟ್ಟಡಗಳ ನಿರ್ಮಾಣ.

ಇ ಈ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಮೀಸಲಾಗಿಟ್ಟ ಹಣ ಎಷ್ಟು; ಇಲ್ಲಿಯವರೆವಿಗೂ ಬಿಡುಗಡೆ ಮಾಡಿದ ಹಣ ಎಷ್ಟು ಹಾಗೂ ಕಾಮಗಾರಿಯು ಯಾವ ಹಂತದಲ್ಲಿವೆ ಎಂಬುದನ್ನು ತಿಳಿಸುವುದು;

ಮೀಸಲಿಟ್ಟ ಒಟ್ಟು ಮೊತ್ತ

– ರೂ.310.00ಕೋಟಿ

ಇದುವರೆವಿಗೆ ಬಿಡುಗಡೆಯಾದ ಮೊತ್ತ

– ರೂ.43.00ಕೋಟಿ

ಕಾಮಗಾರಿ ಪ್ರಾರಂಭವಾಗಬೇಕಾಗಿದೆ

ಈ ಕಾಮಗಾರಿಯನ್ನು ಇನ್ನೂ ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ಹಾಗೂ ವಿಶ್ವವಿದ್ಯಾಲಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಭೂಸ್ವಾಧೀನ ಪ್ರಕ್ರಿಯೆ ಮುಗಿದ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

19ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)
ಮಾನ್ಯ ಕಾರ್ಮಿಕ ಸಚಿವರು.

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳು ಹಾಗೂ ಅದರಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳ ವಿವರಗಳು:

ಸಂಖ್ಯೆ	ಸರ್ಕಾರಿ	ಅನುದಾನಿತ	ಅನುದಾನ ರಹಿತ
ಸಂಸ್ಥೆಗಳು	01	ಇಲ್ಲ	04
ವಿದ್ಯಾರ್ಥಿಗಳು	136	ಇಲ್ಲ	357

ಆ) ಈ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿರುವ ಅಗತ್ಯ ಸಿಬ್ಬಂದಿಗಳ ಕೊರತೆ ಎಷ್ಟು (ವಿವರ ನೀಡುವುದು);

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಕೊರತೆ ಇರುವ ಸಿಬ್ಬಂದಿಗಳು –6. ವಿವರಗಳು:–

1. ಪ್ರಥಮ ದರ್ಜೆ ಸಹಾಯಕರು–01.

2. ದ್ವಿತೀಯ ದರ್ಜೆ ಸಹಾಯಕರು–01.
3. ಕಾರ್ಯಗಾರ ಸಹಾಯಕರು–05.
4. ಸಮೂಹ ಡಿ–03.
5. ಕಿರಿಯ ತರಬೇತಿ ಅಧಿಕಾರಿ–06.

ಇ) 2008ನೇ ಅಧಿವೇಶನದಲ್ಲಿ (13/1) ಈ ಸಿಬ್ಬಂದಿ ಕೊರತೆಯನ್ನು ತಕ್ಷಣವೇ ಪರಿಹರಿಸಲಾಗುವುದೆಂದು ತಿಳಿಸಲಾಗಿದ್ದು, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಲೋಕಸೇವಾ ಆಯೋಗಕ್ಕೆ ಕಿರಿಯ ತರಬೇತಿ ಅಧಿಕಾರಿಗಳನ್ನು ಆಯ್ಕೆ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿರುತ್ತದೆ. ಲೋಕಸೇವಾ ಆಯೋಗದಿಂದ ಆಯ್ಕೆ ಪಟ್ಟಿಯನ್ನು ಪಡೆದು ಶೀಘ್ರವಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಪ್ರಸ್ತುತ ತಾತ್ಕಾಲಿಕವಾಗಿ ಖಾಲಿ ಇರುವ ಕಿರಿಯ ತರಬೇತಿ. ಅಧಿಕಾರಿ ಹುದ್ದೆಗಳ ಎದುರು ಅತಿಥಿ ಬೋಧಕರನ್ನು ಆಹ್ವಾನಿಸಿ ತರಬೇತಿ ನೀಡಲಾಗುತ್ತಿದೆ. ಕ್ರಮ ಸಂಖ್ಯೆ: 1 ರಿಂದ 4 ರಲ್ಲಿನ ಹುದ್ದೆಗಳನ್ನು ನಿಯೋಜನೆ ಮೂಲಕ ತುಂಬಲಾಗಿದೆ

ಹಾಸ್ಟೆಲ್ ಕಟ್ಟಡ ಹಾಗೂ ಸಿಬ್ಬಂದಿ ಕೊರತೆ ಪೂರೈಸಿರುವ ಬಗ್ಗೆ

20ಶ್ರೀ ಬಾಲಕೃಷ್ಣ ಹೆಚ್.ಸಿ.

ಶ್ರೀ.ಡಿ. ಸುಧಾಕರ(ಸಮಾಜ ಕಲ್ಯಾಣ ಸಚಿವರು)

ಅ ಮಾಗಡಿ ವಿಭಾಗ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ವಿವಿಧ ವರ್ಗದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು(ಪ್ರತಿ ವಿದ್ಯಾರ್ಥಿ ನಿಲಯಗಳಲ್ಲಿನ ವಿವರ ನೀಡುವುದು);

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ.ಜಾತಿ. ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ 1082 ಆಗಿದ್ದು 2008–09 ನೇ ಸಾಲಿಗೆ 601 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ನಿಲಯವಾರು ಕೆಳಕಂಡಂತಿದೆ.

ಮಾಗಡಿ ತಾಲ್ಲೂಕು	ಮಂಜೂ ರಾತಿ ಸಂಖ್ಯೆ	ದಾಖ ಲಾತಿ ಸಂಖ್ಯೆ
1.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಗುಡೇಮಾರನಹಳ್ಳಿ	45	39
2.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಬಾಳೇನಹಳ್ಳಿ	50	37
3.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಮಾಗಡಿ ಟೌನ್	110	37
4.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ,	70	27